ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/75/2015-16. ದಿನಾಂಕ:20-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಎ.ತಿಪ್ಪೇಸ್ವಾಮಿ ತಂದೆ ಲೇಟ್ ಅಂಗಡಿ ಅಯ್ಯಣ್ಣ<br>ಜುಮ್ಮೋಬನಹಳ್ಳಿ ಗ್ರಾಮ<br>2)ಜಿ.ಎಂ.ಶರಣಬಸಯ್ಯ ತಂದೆ ಶರಣಯ್ಯ<br>ಚೌಡಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಜಿ.ಎಂ.ಗಂಗಾಧರ ತಂದೆ ಲೇಟ್ ಶರಣಯ್ಯ<br>2)ಜಿ.ಎಂ.ರೇವಣಸಿದ್ದಯ್ಯ ತಂದೆ ಲೇಟ್ ಶರಣಯ್ಯ<br>3)ಜಿ.ಎಂ.ನಾಗೇಂದ್ರಯ್ಯ ತಂದೆ ಲೇಟ್ ಶರಣಯ್ಯ<br>4)ಜಿ.ಎಂ.ಮಂಜುನಾಥ ತಂದೆ ಲೇಟ್ ಶರಣಯ್ಯ<br>ಚೌಡಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 838ಪೈಕಿ. ವಿಸ್ತೀರ್ಣ 2-30. ಎಕ್ರೆ ಜಮೀನನ್ನು ಕ್ರಯ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 838ಪೈಕಿ. ವಿಸ್ತೀರ್ಣ 2-30. ಎಕ್ರೆ ಜಮೀನನ್ನು ಸದರಿ ಗ್ರಾಮದ ಜಿ.ಎಂ.ಶರಣಬಸಯ್ಯ ತಂದೆ ಶರಣಯ್ಯ ಇವರಿಂದ ಸದರಿ ತಾಲೂಕು ಜುಮ್ಮೋಬನಹಳ್ಳಿ ಗ್ರಾಮದ ಎ.ತಿಪ್ಪೇಸ್ವಾಮಿ ತಂದೆ ಅಂಗಡಿ ಅಯ್ಯಣ್ಣ ಇವರು ದಿನಾಂಕ 25-11-2009 ರ ಡಾಕ್ಯುಮೆಂಟ್ ನಂಬರ್:1072/2009-10 ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಚೌಡಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 30-12-2009 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಜಿ.ಎಂ.ಗಂಗಾಧರ ತಂದೆ ಲೇಟ್ ಶರಣಯ್ಯ. ಜಿ.ಎಂ.ರೇವಣಸಿದ್ದಯ್ಯ ತಂದೆ ಲೇಟ್ ಶರಣಯ್ಯ. ಜಿ.ಎಂ.ನಾಗೇಂದ್ರಯ್ಯ ತಂದೆ ಲೇಟ್ ಶರಣಯ್ಯ. ಜಿ.ಎಂ.ಮಂಜುನಾಥ ತಂದೆ ಲೇಟ್ ಶರಣಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 43/2009-10. ದಿನಾಂಕ 05-02-2010 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 20-10-2015. ರಿಂದ 20-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಗೈರು ಹಾಜರಾಗಿರುತ್ತಾರೆ.. ಅರ್ಜಿದಾರರು ಚೌಡಾಪುರ ಗ್ರಾಮದ ಸನಂ 838ಪೈಕಿ. ವಿಸ್ತೀರ್ಣ 2-30. ಎಕ್ರೆ ಜಮೀನನ್ನು ಸದರಿ ಗ್ರಾಮದ ಜಿ.ಎಂ.ಶರಣಬಸಯ್ಯ ತಂದೆ ಶರಣಯ್ಯ. ಇವರಿಂದ ದಿನಾಂಕ 25-11-2009 ರ ಡಾಕ್ಯುಮೆಂಟ್ ನಂಬರ್: 1075/2009-10. ರ ಪ್ರಕಾರ ರೂ: 69.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ.ಆದರೆ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಗೈರುಹಾಜರಾಗಿರುತ್ತಾರೆ. ಸದರಿ ವಿವಾದಿತ ಜಮೀನು ಅಣ್ಣ ತಮ್ಮಂದಿರ ಕುಟುಂಬಕ್ಕೆ ಸೇರಿದ ಜಮೀನು ಆಗಿದ್ದು ಸದರಿ ಜಮೀನಿನಲ್ಲಿ ಜಿ.ಎಂ.ಮಂಜುನಾಥ ತಂದೆ ಶರಣಯ್ಯ ಇವರಿಗೆ ಭಾಗ ಇರುತ್ತದೆಯೇಂದು ಸದರಿ ಜಮೀನಿನಲ್ಲಿ ಭಾಗಕ್ಕೆ ಇತ್ಯರ್ಥವಾಗಿಲ್ಲದ ಕಾರಣ ಸದರಿ ಕ್ರಯ ಪತ್ರ ಪ್ರಕಾರ ತಕರಾರು ಇರುವುದೆಂದು ತಕರಾರು ಅರ್ಜಿ ಸಲ್ಲಿಸಿದ್ದು ಆದರೆ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ಸದರಿ ಪ್ರಕರಣದಲ್ಲಿ ವಿವಾದಾಸ್ಪದ ಸ್ವತ್ತಿನಲ್ಲಿ ತಮಗೂ ಪಾಲು ಇರುವುದಾಗಿ ತಕರಾರುದಾರರು ಆಕ್ಷೇಪಣೆ ಅರ್ಜಿ ಸಲ್ಲಿಸಿದ್ದು ಅದರೆ ಇದುವರೆಗೂ ವಿಚಾರಣೆಗೆ ಹಾಜರಾಗಿರುವುದಿಲ್ಲ ತಕರಾರುದಾರರು ತಮ್ಮ ಹಕ್ಕನ್ನು ಸಾಬೀತು ಪಡಿಸಲು ಸಿವಿಲ್ ನ್ಯಾಯಾಲಯದಲ್ಲಿ ಮೊರೆ ಹೋಗಲು ತಿಳಿಸುತ್ತಾ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಚೌಡಾಪುರ ಗ್ರಾಮದ ಸನಂ 838ಪೈಕಿ. ವಿಸ್ತೀರ್ಣ 2–30. ಎಕ್ರೆ ಜಮೀನನ್ನು ದಿನಾಂಕ 25–11–2009 ರ ಡಾಕ್ಯುಮೆಂಟ್ ನಂಬರ್: 1072/2009–10. ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಎ.ತಿಪ್ಪೇಸ್ವಾಮಿ ತಂದೆ ಲೇಟ್ ಅಂಗಡಿ ಅಯ್ಯಣ್ಣ ಜುಮ್ಮೋಬನಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡ ಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಎ.ತಿಪ್ಪೇಸ್ವಾಮಿ ತಂದೆ ಅಂಗಡಿ ಅಯ್ಯಣ್ಣ.ಜುಮ್ಮೋಬನಹಳ್ಳಿ. ಗ್ರಾಮ ಜಿ.ಎಂ.ಶರಣಬಸಯ್ಯ ತಂದೆ ಶರಣಯ್ಯ ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಜಿ.ಎಂ.ಗಂಗಾಧರ ತಂದೆ ಲೇಟ್ ಶರಣಯ್ಯ. ಜಿ.ಎಂ.ರೇವಣಸಿದ್ದಯ್ಯ ತಂದೆ ಲೇಟ್ ಶರಣಯ್ಯ ಹಾಗೂ ಇತರರು ಚೌಡಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.